2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.

<u>ಓ ಎಸ್ ನಂ. **697/2019**</u>

ದಿನಾಂಕಃ **16.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

| | | |
|---|---|---|
| ಸಾಕ್ಷಿಯ ಹೆಸರು ಃ | ಆರ್ ರವಿ | ಡಿಡಬ್ಲೂ-5 |
| ತಂದೆಯ ಹೆಸರುಃ | ರಂಗಪ್ಪ | |
| ವಯಸ್ಸು ಃ | 53 ವರ್ಷ | |
| ಉದ್ಯೋಗ ಃ | ಮುಖ್ಯ ಕಾರ್ಯನಿರ್ವಹಣಾಧಿಕಾರಿ | |
| ವಾಸ ಃ | ಸಿಂಗಟಗೆರೆ | |

<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಾದ ಶ್ರೀ ಜಿ ಹೆಚ್ ಕೆ ರವರಿಂದ ಃ</u>

ನಾನು 2001 ರಿಂದ ಇಲ್ಲಿಯವರೆಗೂ ಪಿಎಸಿಎಸ್, ಸಿಂಗಟಗೆರೆ ಶಾಖೆಯಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ.

ನಮ್ಮ ಸಂಸ್ಥೆಯಿಂದ ಈ ಪ್ರಕರಣದ ವಾದಿ ಮತ್ತು ಪ್ರತಿವಾದಿಯ ತಂದೆಯಾದ ರಾಜಪ್ಪ ರವರು ನಮ್ಮ ಸಂಸ್ಥೆಯಿಂದ ಪಡೆದ ಸಾಲಕ್ಕೆ ಸಂಬಂಧಿಸಿದಂತೆ ಸಾಕ್ಷಿ ನುಡಿಯಲು ಮತ್ತು ದಾಖಲೆಯನ್ನು ಹಾಜರುಪಡಿಸಲು ನನಗೆ ಸಮನ್ಸ್ ಬಂದಿರುತ್ತದೆ. ಸದರಿ ರಾಜಪ್ಪ ರವರು 2013 ರಲ್ಲಿ ಬೆಳೆ ಸಾಲವಾಗಿ ರೂ. 40,000 ಗಳನ್ನು ಪಡೆದಿರುತ್ತಾರೆ. ಅದೇ ರೀತಿ ಹೆಚ್ಚುವರಿಯಾಗಿ ಬೆಳೆ ಸಾಲಕ್ಕೆ ರೂ. 1.00 ಲಕ್ಷಗಳನ್ನು ಸಾಲವಾಗಿ ಪಡೆದಿರುತ್ತಾರೆ. ಸದರಿ ಸಾಲವನ್ನು ತೀರುವಳಿ ಮಾಡದೇ ಮರಣಹೊಂದಿರುತ್ತಾರೆ. ಸಾಲದ ಖಾತೆಯು ಸುಸ್ತಿ ಖಾತೆಯಾಗಿರುತ್ತದೆ. ಈ ಸಂಬಂಧ ಅವರ ಮಗನಾದ ಕಲ್ಲೇಶ್ ರವರಿಗೆ ನೋಟಿಸನ್ನು ಜಾರಿ ಮಾಡಿದ್ದು ಕಲ್ಲೇಶ್ ರವರು ನ್ಯಾಯಾಲಯದಲ್ಲಿ ದಾವೆ ಇದ್ದು ಬಗೆಹರಿದ ಮೇಲೆ ಕಟ್ಟುತ್ತೇನೆ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ. ಬ್ಯಾಂಕಿನವರು ಸಾಲ ವಸೂಲಾತಿಗಾಗಿ ಈವರೆವಿಗೂ ಯಾವುದೇ ದಾವೆಯನ್ನು ಹೂಡಿರುವುದಿಲ್ಲ. ಪ್ರಸ್ತುತ ರಾಜಪ್ಪನವರ ಸಾಲದ ಖಾತೆಗೆ ರೂ. 1,40,000 ಅಸಲು ಮತ್ತು ಅದಕ್ಕೆ ಸಂಬಂಧಿಸಿದ ಬಡ್ಡಿಯನ್ನು ಪಾವತಿಸಬೇಕಾಗಿರುತ್ತದೆ. ಸಾಲವನ್ನು ಪಡೆದವರು ಮರಣ ಹೊಂದಿದ್ದಲ್ಲಿ ಅವರ ವಾರಸುದಾರರು ಸದರಿ ಸಾಲವನ್ನು ತೀರುವಳಿ ಮಾಡಬೇಕಾಗಿರುತ್ತದೆ.

ಪಾಟೀ ಸವಾಲು ಃ ವಾದಿ ಪರ ಶ್ರೀ ಬಿ ಆರ್ ವಕೀಲರಿಂದ ಃ

ಸಾಲ ಪಡೆಯಲು ರಾಜಪ್ಪ ರವರು 2013-14 ನೇ ಸಾಲಿನಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆರಂಭದಲ್ಲಿ ರೂ. 40,000 ಗಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ನಂತರ 2021 ರಲ್ಲಿ ಹೆಚ್ಚುವರಿಯಾಗಿ ರೂ. 1.00 ಲಕ್ಷ ಸಾಲ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ. 2021 ರಲ್ಲಿ ಹೆಚ್ಚುವರಿಯಾಗಿ ಸಾಲ ನೀಡುವಂತೆ ನೀಡಿರುವ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿರುವುದಿಲ್ಲ. ಸದರಿ ಅರ್ಜಿ ನಮ್ಮ ಬ್ಯಾಂಕಿನಲ್ಲಿ ಇರುತ್ತದೆ. ಅರ್ಜಿ ನೀಡಿದ ನಂತರ ಬೋರ್ಡ ಮೀಟಿಂಗ್ ನಲ್ಲಿ ಚರ್ಚಿಸಿ ಸಾಲ ಮಂಜೂರಾತಿ ಮಾಡುತ್ತೇವೆ. ಸದರಿ ಮಂಜೂರಾತಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿರುವುದಿಲ್ಲ.

ರಾಜಪ್ಪ ರವರಿಗೆ ಕೃಷಿ ಸಾಲವನ್ನು ನೀಡಿರುತ್ತೇವೆ. ಕೃಷಿ ಸಾಲದಲ್ಲಿ ಬೆಳೆಯನ್ನು ಬೆಳೆದು ಮಾರಾಟ ಮಾಡಿದ ನಂತರ ಅದನ್ನು ಮರುಪಾವತಿ ಮಾಡುತ್ತಾರೆ ಎಂದರೆ ಸರಿ. ಸಾಲಕ್ಕೆ ಸಂಬಂಧಿಸಿದಂತೆ ರಾಜಪ್ಪ ರವರು ಆಸ್ತಿಯನ್ನು ಆಧಾರ ಮಾಡಿರುತ್ತಾರೆ. ಸದರಿ ಆಧಾರವನ್ನು ಫಾರಂ ನಂ 3 ರಲ್ಲಿ ಮಾಡಿರುತ್ತಾರೆ. ಸದರಿ ಆಧಾರಪತ್ರ ನೋಂದಣಿಯಾಗಿರುವುದಿಲ್ಲ. ನಾನು 20 ವರ್ಷಗಳಿಂದ ಬ್ಯಾಂಕಿನಲ್ಲಿ ಕೆಲಸ ಮಾಡಿಕೊಂಡಿರುತ್ತೇನೆ. ಅಡಮಾನ ಮಾಡುವ ಸಮಯದಲ್ಲಿ ಆಸ್ತಿಯ ಮೇಲೆ ಹಿತಾಸಕ್ತಿ ಇರುವವರ ಸಹಿ ಪಡೆಯುತ್ತೇವೆ. ಸಾಕ್ಷಿ ಮುಂದುವರೆದು ರಾಜಪ್ಪ ಮತ್ತು ಅವರ ಮಗನ ಸಹಿ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಸಾಲಕ್ಕೆ ಅರ್ಜಿ ನೀಡುವಾಗ ವಂಶವೃಕ್ಷವನ್ನು ನೀಡುತ್ತಾರೆ ಎಂದರೆ ಸರಿ. ರಾಜಪ್ಪ ರವರು ಸಾಲ ನೀಡುವ ಎಷ್ಟು ವರ್ಷದ ಹಿಂದಿನಿಂದ ಪರಿಚಯ ಎಂದರೆ ಸಾಕ್ಷಿ ಸಾಲ ನೀಡುವಾಗ ಪರಿಚಯ ಎಂದು ನುಡಿಯುತ್ತಾರೆ. ಅವರು ಹಾಜರುಪಡಿಸಿರುವ ವಂಶವೃಕ್ಷದಲ್ಲಿ ಅವರ ಹೆಣ್ಣು ಮಕ್ಕಳು ಮತ್ತು ಒಬ್ಬ ಮಗನ ಹೆಸರಿತ್ತು. ಸಾಮಾನ್ಯ ಅಡಮಾನಪತ್ರ ಕಡ್ಡಾಯವಾಗಿ ನೋಂದಣಿಯಾಗಬೇಕಾದ ದಸ್ತಾವೇಜು ಎಂದರೆ ಸರಿ. ಸಾಲವನ್ನು ಮಂಜೂರು ಮಾಡುವಾಗ ರಾಜಪ್ಪನವರಿಗೆ ಹೆಣ್ಣು ಮಕ್ಕಳು ಇರುವ ವಿಚಾರ ಗೊತ್ತಿತ್ತು. ನಾನು ಅವರ ಹೆಣ್ಣು ಮಕ್ಕಳ ಸಹಿ ಪಡೆದಿರುವುದಿಲ್ಲ.

ಆಸ್ತಿಗಳು ರಾಜಪ್ಪ ರವರಿಗೆ ಹೇಗೆ ಬಂತು ಎಂದರೆ ಅವರು ಖರೀದಿಸಿರುತ್ತಾರೆ. ದಾವಾ ಆಸ್ತಿಗಳು ರಾಜಪ್ಪ ರವರಿಗೆ ವಿಭಾಗದಲ್ಲಿ ಬಂದಿರುವ ಆಸ್ತಿಗಳು ಎಂದರೆ ಸಾಕ್ಷಿ ಅವರು ಖರೀದಿ ಮಾಡಿರುವ ಆಸ್ತಿಗಳೂ ಇರುತ್ತವೆ ಎಂದು ನುಡಿಯುತ್ತಾರೆ. ಅವರು ಖರೀದಿ ಮಾಡಿದ ಆಸ್ತಿಗಳು ಯಾವವು ಎಂದು ನನಗೆ ಹೇಳಲಾಗುವುದಿಲ್ಲ. ಸಾಲ ನೀಡುವ ಸಮಯಕ್ಕೆ ರಾಜಪ್ಪ ರವರ ಕುಟುಂಬದಲ್ಲಿ ವಿಭಾಗವಾಗಿಲ್ಲ ಎಂದರೆ ಸರಿ. ದಾವಾ ಆಸ್ತಿಗಳು ರಾಜಪ್ಪ ಮತ್ತು ಅವರ ಮಕ್ಕಳ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿ. ನಾನು ಸಾಲ ನೀಡುವ ಸಮಯದಲ್ಲಿ ರಾಜಪ್ಪ ರವರ ಹೆಣ್ಣು ಮಕ್ಕಳ ಒಪ್ಪಿಗೆ ಪಡೆದಿಲ್ಲ ಎಂದರೆ ಸರಿ. ಸಾಲ ಪಡೆಯಲು ರಾಜಪ್ಪ ಮತ್ತು 1 ನೇ ಪ್ರತಿವಾದಿ ಬಂದಿರುತ್ತಾರೆ. ಹಣವನ್ನು ಯಾರು ಉಪಯೋಗಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸಾಲಕ್ಕೆ ಸಂಬಂಧಿಸಿದಂತೆ ನೋಂದಾಯಿತ ಅಡಮಾನ ಪತ್ರ ಮಾಡಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ನಾವೇ ಫಾರಂ ನಂ 3 ನ್ನು ನೋಂದಣಿಗೊಳಿಸಿರುತ್ತೇವೆ ಎಂದು ನುಡಿಯುತ್ತಾರೆ. ನೋಂದಾಯಿತವಲ್ಲದ ಅಡಮಾನದ ಸಾಲದ ವಸೂಲಾತಿಗೆ 3 ವರ್ಷಗಳ ಕಾಲ ಪರಿಮಿತಿ ಇರುತ್ತದೆ ಎಂದರೆ ಸರಿ. 2013 ರಿಂದ ಪ್ರತಿವರ್ಷ ರಾಜಪ್ಪ ರವರು ಸಾಲವನ್ನು ನವೀಕರಿಸುತ್ತಾ ಬಂದಿರುತ್ತಾರೆ. ರಾಜಪ್ಪ ರವರು 2023 ರಲ್ಲಿ ಮರಣ ಹೊಂದಿರುತ್ತಾರೆ. ರಾಜಪ್ಪ ರವರು ಮರಣ ಹೊಂದಿ 4 ವರ್ಷವಾಗಿರುತ್ತದೆ ಎಂದರೆ ಸಾಕ್ಷಿ 3 ವರ್ಷವಾಗಿರುತ್ತದೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಹೇಳಿಕೆ ಆಧಾರದ ಮೇಲೆ ರಾಜಪ್ಪ ರವರು ಮರಣ ಹೊಂದಿ 3 ವರ್ಷವಾಗಿರುತ್ತದೆ ಎಂದು ಹೇಳುತ್ತಿದ್ದೇನೆ. ರಾಜಪ್ಪ ರವರ ಮರಣಾನಂತರ ಅವರು ಪಡೆದ ಸಾಲದ ವಸೂಲಾತಿಗಾಗಿ ಈವರೆವಿಗೂ ಯಾವುದೇ ನ್ಯಾಯಾಲಯದಲ್ಲಿ ದಾವೆ ಹೂಡಿಲ್ಲ ಎಂದರೆ ಸರಿ. 3 ವರ್ಷದ ನಂತರ ಬೆಳೆ ಸಾಲದ ವಸೂಲಾತಿಗಾಗಿ ದಾವೆ ಹೂಡಲು ಕಾಲಪರಿಮಿತಿ ಇಲ್ಲಾ ಎಂಬ ವಿಷಯ ನನಗೆ ಗೊತ್ತು ಎಂದರೆ ಸರಿ.

ಈವರೆವಿಗೂ ಸಾಲಕ್ಕೆ ಅರ್ಜಿ ನೀಡಿದ 1ನೇ ಪ್ರತಿವಾದಿ ವಿರುದ್ಧ ಯಾವುದೇ ದಾವೆ ಹೂಡಲು ಕ್ರಮ ಕೈಗೊಂಡಿರುವುದಿಲ್ಲ. ಸಾಕ್ಷಿ ಮುಂದುವರೆದು ನೋಟಿಸು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಬಳಿ ಇರುವ ದಾಖಲೆ ಆಧಾರದ ಮೇಲೆ ರಾಜಪ್ಪ ರವರಿಗೆ ನೀಡಿದ ಸಾಲವನ್ನು ವಸೂಲು ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಕಾಲಪರಿಮಿತಿ ಮುಗಿದ ಸಾಲಕ್ಕೆ 1ನೇ ಪ್ರತಿವಾದಿಯೊಂದಿಗೆ ಶರೀಖಾಗಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನೀಡಿರುವ ಸಾಲವು ರಾಜಪ್ಪ ರವರ ಜೀವಿತಾವಧಿಯಲ್ಲಿಯೇ ಮನ್ನಾ ಆಗಿರುವ ಕಾರಣ ಸಾಲ ವಸೂಲಾತಿಗಾಗಿ ಕ್ರಮ ಕೈಗೊಂಡಿಲ್ಲ ಎಂದರೆ ಸರಿಯಲ್ಲ. ರಾಜಪ್ಪ ರವರ ಹೆಣ್ಣು ಮಕ್ಕಳಿಂದ ಅಕ್ರಮವಾಗಿ ಹಣ ವಸೂಲಾತಿಗಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸ್ತುತ ರಾಜಪ್ಪ ರವರು ಎಷ್ಟು ಮೊತ್ತಕ್ಕೆ ಸುಸ್ತಿದಾರರು ಎಂದು ತೋರಿಸುವ ದಾಖಲೆ ನನ್ನ ಬಳಿ ಇಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚರಣೆ ಇಲ್ಲಾ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

Sd/-
2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.